ಓ ಎಸ್ ನಂ. 25/2017
ಪಿ ಡಬ್ಲ್ಯೂ: 1
ದಿನಾಂಕ 06-09-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ: ಶ್ರೀ ಎಸ್ ಎನ್ ಜಿ ವಕೀಲರಿಂದ:

ನಾನು ಈ ಕೇಸನ್ನು 11 ಎಕರೆ 28 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಹಾಕಿದ್ದೇನೆ. 11 ಎಕರೆ 28 ಗುಂಟೆ ಜಮೀನಿನ ಖಾತೆ ಬಶೀರ್ ಸಾಬ್, ಸಗೀರ್ ಅಹಮ್ಮದ್, ಖಲಂದರ್ ಸಾಬ್ ಮತ್ತು ಅವರ ಮಕ್ಕಳ ಹೆಸರಿನಲ್ಲಿರುತ್ತದೆ. ಈ ಕೇಸಿನಲ್ಲಿ ಖರಲಂದರ್ ಸಾಬ್‌ರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ, ಅವರ ಮಕ್ಕಳನ್ನು ಪಕ್ಕಗಾರರನ್ನಾಗಿ ಮಾಡಿರುವುದಿಲ್ಲ. ಖಲಂದರ್ ಸಾಬ್ ಇವರ ಹೆಸರಿನಲ್ಲಿ 3 ½ ಎಕರೆ ಜಮೀನು ಇದೆ. ಅವರು ನನ್ನ ಸಂಬಂಧಿಕರಾಗಬೇಕು. ಅವರಿಗೆ ನನ್ನ ಅಣ್ಣ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ, ಸಾಕ್ಷಿ ಮುಂದುವರೆದು ಪಹಣಿಯನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

ಅಬ್ದುಲ್ ಬಶೀರ್ ಸಾಬ್ ಇವರ ಹೆಸರಿನಲ್ಲಿ 5 ಎಕರೆ ಜಮೀನು, ಸಗೀರ್ ಸಾಬ್ ರವರ ಹೆಸರಿನಲ್ಲಿ 2 ಎಕರೆ 28 ಗುಂಟೆ, ಮುಸ್ರಪ್ ಅಹಮ್ಮದ್ ಇವರ ಹೆಸರಿನಲ್ಲಿ 20 ಗುಂಟೆ ಜಮೀನು ಇದೆ. ಸದರಿ ಮುಸ್ರಪ್ ಅಹಮ್ಮದ್ ರವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅವರಿಗೆ ನಾನು ಮತ್ತು ನನ್ನ ಅಣ್ಣ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ. ಜಾಕೀರ್ ಖಾನ್ ಇವರ

ಹೆಸರಿನಲ್ಲಿ 1 ಎಕರೆ 6 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪಹಣಿ ಪತ್ರಿಕೆಯಲ್ಲಿರುವಂತಹ ಅಬ್ದುಲ್ ಬಶೀರ್ ಮತ್ತು ಸಗೀರ್ ಅಹಮ್ಮದ್ ಇವರನ್ನು ಹೊರತು ಪಡಿಸಿ ಈ ದಾವೆಯಲ್ಲಿ ಉದ್ದೇಶ ಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ವಾದಪತ್ರದ ಪ್ಯಾರಾ ನಂ.3 ರಲ್ಲಿ ಹೇಳಿರುವಂತೆ ನಮ್ಮ ತಂದೆಯವರು ಬಿಟ್ಟು ಹೋದಂತಹ ನಿವೇಶನ ಮತ್ತು ಮನೆಗೆ ಸಂಬಂದಪಟ್ಟ ದಾಖಲೆಗಳನ್ನು ತೆಗೆದಿರುವುದಿಲ್ಲ ಎಂದು ಬರೆದಿದ್ದು, ಆ ದಾಖಲಾತಿಗಳನ್ನು ಪಡೆಯಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ನನಗೆ ಓದು ಬರಹ ಬರುವುದಿಲ್ಲ. ಮನೆ ಮತ್ತು ನಿವೇಶನಕ್ಕೆ ಸಂಬಂದಪಟ್ಟಂತೆ ಖಾತಾ ಎಕ್ಸಟ್ರಾಕ್ಟನ್ನು ಹಾಜರುಪಡಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಷೆಡ್ಯೂಲ್ ಸರ್ವೆ ನಂ.119/1 ರ ಆಸ್ತಿಗೆ ಸಂಬಂದಪಟ್ಟ ದಾಖಲೆಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

1993-94 ರಲ್ಲಿ ನನ್ನ ಅಣ್ಣನ ವಿರುದ್ದ ಆಸ್ತಿ ಬೇಕೆಂದು ದಾವೆ ಸಲ್ಲಿಸಿದ್ದೆ ಎಂದರೆ ನಿಜ. ಆ ಕೇಸನ್ನು ನಡೆಸಿರುವುದಿಲ್ಲ, ಊರಿನಲ್ಲಿ ರಾಜಿ ಮಾಡಿಕೊಳ್ಳುತ್ತೇವೆಂದು ಬಿಟ್ಟಿರುತ್ತೇನೆ. ಆ ವಿಚಾರವನ್ನು ಈ ದಾವೆಯಲ್ಲಿ ತಿಳಿಸಿರುವುದಿಲ್ಲ. ಮುಸ್ರಪ್ ಅಹಮ್ಮದ್ ರವರಿಗೆ ನಾನೇ 20 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇನೆ ಎಂದರೆ

ಸರಿಯಲ್ಲ. ನಾನು 1982 ರಿಂದಲೂ ಚಿಕ್ಕಮಗಳೂರಿನಲ್ಲಿದ್ದೇನೆ. ನನ್ನ ತಂದೆ 1990 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ಅಣ್ಣನ ಹೆಸರಿಗೆ ಪೌತಿ ಖಾತೆ 11 ಎಕರೆ 28 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಬಂದಿದೆ. ಆ ಬಗ್ಗೆ ದಾಖಲಾತಿಯನ್ನು ಕೊಟ್ಟಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.